# ಬೊಳುವಾರು ಮಹಮದ್ ಕುಂಞ



ಕನ್ನಡದ ವಿಶಿಷ್ಟ ಕತೆಗಾರ ಬೊಳುವಾರು ಮಹಮದ್ ಕುಂಞ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬೊಳುವಾರುನವರು. ಪುತ್ತೂರು, ಮಂಗಳೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸ. ತಂದೆ ಅಬ್ಬಾಸ್ ಬ್ಯಾರಿ, ತಾಯಿ ಕುಲ್ಸುಂ.

ಕನ್ನಡ ಗದ್ಯ ಸಾಹಿತ್ಯಕ್ಕೆ ಮುಸ್ಲಿಂ ಜಗತ್ತನ್ನು ಮೊದಲ ಬಾರಿಗೆ ಪರಿಚಯಿಸಿದ ಬೊಳುವಾರು ಕಥನಗಾರಿಕೆಯಲ್ಲಿ ಅನನ್ಯ ದನಿ, ಬನಿಯನ್ನು ಕಾಣಿಸಿದ ಲೇಖಕ. ಅವರು ಸೃಷ್ಟಿಸಿದ 'ಮುತ್ತುಪ್ಪಾಡಿ' ಎಂಬ ಕಾಲ್ಪನಿಕ ಊರಿನಲ್ಲಿ ನಡೆಯುವ ಕತೆಗಳು ಅತ್ಯಂತ ವಿಶಿಷ್ಟವಾಗಿವೆ. ಬ್ಯಾಂಕ್ ಉದ್ಯೋಗಿಯಾಗಿ ನಾಲ್ಕು ದಶಕ ಕೆಲಸ ಮಾಡಿ ನಿವೃತ್ತರಾಗಿರುವ ಅವರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

'ಅತ್ತ, ಇತ್ತಗಳ ಸುತ್ತಮುತ್ತ', 'ದೇವರುಗಳ ರಾಜ್ಯದಲ್ಲಿ', 'ಅಂಕ', 'ಆಕಾಶಕ್ಕೆ ನೀಲಿ ಪರದೆ', 'ಒಂದು ತುಂಡು ಗೋಡೆ', ಅವರ ಕಥಾಸಂಗ್ರಹಗಳು. 'ತಟ್ಟು ಚಪ್ಪಾಳೆ ಪುಟ್ಟ ಮಗು' ಅವರು ಸಂಪಾದಿಸಿದ ಮಕ್ಕಳ ಪದ್ಯಗಳ ಸಂಕಲನ. 'ಜೆಹಾದ್', 'ಸ್ವಾತಂತ್ರ್ಯದ ಓಟ', 'ಓದಿರಿ' ಅವರ ಕಾದಂಬರಿಗಳು. ಕೇಂದ್ರ ಸಾಹಿತ್ಯ ಅಕಾಡೆಮಿಯ ಪರಂಪರೆಯಲ್ಲೇ ಮೊತ್ತ ಮೊದಲಬಾರಿಗೆ ತಮ್ಮ ಸೃಜನಶೀಲ ಕೃತಿಗಳಿಗಾಗಿ ಎರಡು ಬಾರಿ ಪ್ರಶಸ್ತಿಗಳನ್ನು ಪಡೆದ ಇವರು, ಕನ್ನಡದ ಮಕ್ಕಳ ಸಾಹಿತ್ಯಕ್ಕೆ 'ಕೇಂದ್ರ ಸಾಹಿತ್ಯ ಅಕಾಡೆಮಿ'ಯಿಂದ ಮೊತ್ತಮೊದಲ ಪ್ರಶಸ್ತಿಯನ್ನೂ ತಂದು ಕೊಟ್ಟಿದ್ದಾರೆ. ರಾಷ್ಟ್ರಪ್ರಶಸ್ತಿ ಪಡೆದ 'ಮುನ್ನುಡಿ' ಸಿನಿಮಾದ ಕತೆಯೂ ಇವರದ್ದೇ.

ಪ್ರಕರಣ'ವನ್ನು ಗೆಳೆಯ ಶೇಟ್ ಅವರಿಗೆ ಕೃತಜ್ಞತೆಯ ರೂಪದಲ್ಲಿ ಹಲವು ಕಡೆ ವಿವರವಾಗಿ ದಾಖಲಿಸಿರುವುದರಿಂದ ಇಲ್ಲಿ ಕೈಬಿಟ್ಟಿರುವೆ).

ನನ್ನ ಮೊದಲ ಕತೆ 'ನಿರೀಕ್ಷೆ' ಪ್ರಕಟವಾದದ್ದು ಮಂಗಳೂರಿನ 'ನವಭಾರತ' ದಿನಪತ್ರಿಕೆಯಲ್ಲಿ. ನಾನು ಬರೆಯಲಾರಂಭಿಸಿದ್ದ ಎಪ್ಪತ್ತರ ದಶಕದಲ್ಲಿ ನನ್ನೂರು ಸಾಕ್ಷರತೆಯ ಕಡೆಗೆ ಮುಖ ಮಾಡಿತ್ತು. ಅದುವರೆಗೆ ಶಾಲೆಯ ಮುಖ ನೋಡದಿದ್ದವರೂ ಬೆಳಗ್ಗೆ ಎದ್ದ ಬಳಿಕದ ನಿತ್ಯಕರ್ಮಗಳಲ್ಲಿ, ಚೀಲ ಎತ್ತಿಕೊಂಡು ಶಾಲೆಗೆ ಹೋಗುವುದನ್ನೂ ಸೇರಿಸಿಕೊಂಡಿದ್ದ ದಿನಗಳು ಅವು. ಎಂಬತ್ತರ ದಶಕದಲ್ಲಿ ಕನ್ನಡ ಓದುಗರ ಸಂಖ್ಯೆಯೂ ಹೆಚ್ಚಾಗತೊಡಗಿತ್ತು. ಮುಸ್ಲಿಮ್ ಹುಡುಗರು, ಅದರಲ್ಲೂ ಮುಖ್ಯವಾಗಿ ಹುಡುಗಿಯರು ಕನ್ನಡ ಓದಲು ಆರಂಭಿಸಿದ್ದರಿಂದ ನಾನು ಯಾರಿಗೆ ಮತ್ತು ಏನನ್ನು ಬರೆಯಬೇಕು ಎಂಬ ಗೊಂದಲಕ್ಕೆ ಪರಿಹಾರ ಸಿಕ್ಕಿತ್ತು. ಆ ದಿನಗಳಲ್ಲೇ ಹುಟ್ಟಿಕೊಂಡಿದ್ದ 'ಬಂಡಾಯ ಸಾಹಿತ್ಯ ಚಳವಳಿ' ಹಾಗೂ 'ಸಮುದಾಯ' ಸಂಘಟನೆಗಳ ಜೊತೆಗಿನ ನನ್ನ ಒಡನಾಟಗಳು, ಕನ್ನಡ ಸಾಹಿತ್ಯಲೋಕದಲ್ಲಿ ನಾನು ಮಾಡಲೇ ಬೇಕಾಗಿರುವ ಹೊಸ ಕೆಲಸಗಳಾವುವು ಎಂಬುದನ್ನು ತಿಳಿಸಿತ್ತು. ಆ ಎಲ್ಲ 'ಹೊಸತು'ಗಳನ್ನು ಕೂಡಿ, ಕಳೆದು, ಭಾಗಿಸಿ